ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಬೆಳಗಾಂ ಕಡೆ ಹೋಗಿಲ್ಲ ಎಂದು ಕಾಣುತ್ತದೆ. ಈಗಾಗಲೇ ಅಲ್ಲಿರುವ ಅನ್ಪತ್ತೆ ಚೆನ್ನಾಗಿದೆ. ನಾನಾಗಲೇ ಹೇಳಿದಂತೆ ಅಲ್ಲಿ 450 ಬೆಡ್ಡುಗಳಿವೆ. ಇದನ್ನು ಇನ್ನೂ ಹೆಚ್ಚು ಮಾಡಲು ಒಂದು ಸ್ಕೀಮನ್ನು ತಯಾರು ಮಾಡಬೇಕೆಂದು ಯೋಚನೆ ಮಾಡಲಾಗುತ್ತಿದೆ.

ಶ್ರೀ ಗಂಗಾಧರ ನಾಮೋಷಿ.—ಗುಲ್ಬರ್ಗಾ ಮೆಡಿಕಲ್ ಕಾಲೇಜು ಹಾಗೂ ಬೆಳಗಾಂನಲ್ಲಿರುವ ಮೆಡಿಕಲ್ ಕಾಲೇಜುಗಳಲ್ಲಿ ಮೊದಲು 5,000 ರೂಪಾಯಿಗಳಷ್ಟು ಕೊಡಬೇಕೆಂದು ನಿರ್ಣಯ ಮಾಡಿ ಅದರಂತೆ ತಕ್ಕ ಕ್ರಮ ತೆಗೆದುಕೊಂಡ ನಂತರ, 3,000 ರೂಪಾಯಿಗಳಷ್ಟನ್ನು ಮ್ಯೆನೂರಿನವರಿಗಾಗಿ ಎಂದು ಸರ್ಕಾರ ತೀರ್ಮಾನ ಮಾಡಿದರೂ ಇಲ್ಲಿನವರಿಗೆ ಹೆಚ್ಚಿಗೆ ಸೀಟುಗಳನ್ನು ಕೊಡರಾಗಲಲ್ಲ ಎನ್ನುವುದು ನಿಜವೇ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರ ಭಾವನೆ ತಪ್ಪು.

ಶ್ರೀ ಎಸ್. ಗೋಪಾಲ ರೆಡ್ಡಿ.—ಒಂದು ಕಡೆ ಕ್ಲಿನಿಕಲ್ ಫೆಸಿಲಿಟಿಗಳನ್ನು ಕೊಡುವುದಕ್ಕಾಗಿದೇ ಇರುವುದು, ಇನ್ನೊಂದು ಕಡೆ ಅಧ್ಯಾಪಕರುಗಳ ಕೊರತೆ ಇರುವುದು—ಈ ಕಾರಣಗಳಿಂದಾಗಿ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡರಾಗಲಲ್ಲ ಎನ್ನುವುದು ನಿಜವೇ?

ಶ್ರೀ ಎಸ್. ಆರ್. ಕಂಠಿ.—ಮುಂದೆ ಏನಾಗುತ್ತದೋ ಅದನ್ನು ಹೇಳುವುದಕ್ಕಾಗುವುದಿಲ್ಲ. ತಾವು ಸ್ವಲ್ಪ ಮಣಿಪಾಲ್‌ವರೆಗೆ ಹೋಗಿ ಬಂದರೆ ತಮಗೇ ಗೊತ್ತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡುವುದರ ಉದ್ದೇಶ ಮ್ಯೆನೂರಿನ ಜನತೆಗೆ ಅನುಕೂಲವಾಗಬೇಕೆಂದು. ಆದರೆ ಗುಲ್ಬರ್ಗಾ ಹಾಗೂ ಬೆಳಗಾಂನಲ್ಲಿರುವ ಮೆಡಿಕಲ್ ಕಾಲೇಜುಗಳಲ್ಲಿ ಬರೀ ಆಂಧ್ರದವರು ಹಾಗೂ ಮಹಾರಾಷ್ಟ್ರದವರು ತುಂಬಿಕೊಂಡಿದ್ದಾರೆ ಹಾಗೂ 5,000 ದಿಂದ ಹತ್ತು ಸಾವಿರದವರೆಗೂ ಸೀಟುಗಳು ಮಾರಾಟವಾಗುತ್ತಿರುವುದು ಸರಕಾರಕ್ಕೆ ಗೊತ್ತಿಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಇಲ್ಲ ಹೇಗಿದೆಯೋ ಈಗ ನನಗೆ ಗೊತ್ತಿಲ್ಲ. ನಾನು ಕೇಳಿದ ಮಟ್ಟಿಗೆ ಆಂಧ್ರದವರಿಗೆ ಹಾಗೂ ಮಹಾರಷ್ಟ್ರದವರಿಗೇ ಎಲ್ಲ ಸೀಟುಗಳನ್ನೂ ಕೊಟ್ಟಿದ್ದಾರೆ ಎನ್ನುವ ಭಾವನೆ ಸರಿಯಲ್ಲ.

Facilities provided for the Study of Hindi Vidwan Course in Mysore Government Training College.

*Q.—917. Smt. G. C. BHAGEERATHAMMA (Tumkur).—

Will the Government be pleased to state :—

(*a*) whether it is a fact that facilities have been provided for the study of Hindi Vidwan Course, in the Mysore Government Training College since 1955 ;

(*b*) whether there is any difference in the Hindi Vidwan Examination, conducted by the Government College and the private recognised Hindi Institutions in the State ?

A.—Sri S. R. KANTHI (Minister for Education).—

(*a*) Yes.

(*b*) The question does not arise as the Hindi Vidwan examination is conducted only by Government.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹಿಂದಿ ವಿದ್ವಾನ್ ಕೋರ್ಸನ್ನು ಎಷ್ಟು ವರ್ಷಗಳ ಕೋರ್ಸು ಎಂದು ಮಾಡಲಾಗಿದೆ?

†ಶ್ರೀ ಎಸ್. ಆರ್. ಕಂಠಿ.—ನಾಲ್ಕು ವರ್ಷದ ಕೋರ್ಸು ಎಂದು ಮಾಡಲಾಗಿದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಹಿಂದೀ ವಿದ್ಯಾನ್ ಕೋರ್ಸನ್ನು ಯಾವ ಯಾವ ಪರೀಕ್ಷೆಗೆ ನಮ ಎಂದು ಮಾಡಿ ಯಾವ ಯಾವ ತರಹದ ಸ್ಕೂಲಿಗೆ ಎಂದರೆ ಮಿಡಲ್‌ಸ್ಕೂಲಗೋ ಇಲ್ಲವೇ ಹೈಸ್ಕೂಲಗೋ ಇಲ್ಲ ಕಾಲೇಜಿಗೋ ಕಳುಹಿಸಬೇಕೆಂದು ನೇಮಕ ಮಾಡುತ್ತಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಮಿಡಲ್ ಸ್ಕೂಲನಿಂದ ಟ್ರೇನಿಂಗಿಗಾಗಿ ಬಂದಿದ್ದರೆ ಮಿಡಲ್ ಸ್ಕೂಲಗೇ ವಾಪಸು ಹೋಗುತ್ತಾರೆ. ಹೈಸ್ಕೂಲನಿಂದ ಟ್ರೇನಿಂಗಿಗಾಗಿ ಬಂದವರು ಹೈಸ್ಕೂಲಗೇ ವಾಪಸು ಹೋಗುತ್ತಾರೆ.

ಶ್ರೀಮತಿ ನಾಗರತ್ನಮ್ಮ ಹರೇಮಠ್.—ಹಿಂದೀ ವಿದ್ಯಾನ್ ಕೋರ್ಸ್‌ನ್ನು ಶಾಲೆಗೆ ಹೋಗದೇ ಖಾಸಗಿಯಾಗಿಯೂ ಕಲಯಬಹುದೇ ?

ಶ್ರೀ ಎಸ್. ಆರ್. ಕಂಠಿ.—ಶಾಲೆಗೇ ಹೋಗಬೇಕಾಗುತ್ತದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಈ ಕೋರ್ಸಿಗೆ ಸ್ಟ್ಯಾಂಡರ್ಡ್ ಏನೆಂದು ನಿಗದಿ ಮಾಡಲಾಗಿದೆ ?

ಶ್ರೀ ಎಸ್. ಆರ್. ಕಂಠಿ.—ಈ ಟ್ರೇನಿಂಗಿಗಾಗಿ ಆಯಾ ಶಾಲೆಗಳಿಂದ ನೇಮಕ ಮಾಡರಾಗುತ್ತದೆ. ಆಗ ಇವರು ಯಾವ ಶಾಲೆಗಳಲ್ಲಿ ಯಾವರೀತಿಯ ನಂಬಳಗಳನ್ನು ಪಡೆಯುತ್ತಿರುತ್ತಾರೋ ಅದರಂತೆಯೇ ಇಲ್ಲಿಗೂ ಬಂದು ಟ್ರೇನಿಂಗು ಮುಗಿಸಿಕೊಂಡು ಹೋಗುವಾಗಲೂ ಅದೇ ಸ್ಕೇಡಿನಲ್ಲಯೇ ತಂತಮ್ಮ ಶಾಲೆಗಳಿಗೆ ಹೋಗುತ್ತಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಮಿಡಲ್‌ಸ್ಕೂಲು ಹಾಗೂ ಹೈಸ್ಕೂಲುಗಳಿಗೆ ಹೋಗುತ್ತಾರೆಂದು ಹೇಳಿದಿರಿ. ಸರಕಾರ ಇವರನ್ನು ನೇಮಿಸುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಟ್ರೈನಿಂಗಿಗೆ ಬರುತ್ತಾರೆಂದರೆ ಮಿಡಲ್‌ಸ್ಕೂಲನಲ್ಲಿದ್ದು ಟ್ರೈನಿಂಗಿಗೆ ಬಂದಿದ್ದರೆ ಅದೇ ಮಿಡಲ್‌ಸ್ಕೂಲಗೆ ಕೋರ್ಸು ಮುಗಿದಮೇಲೆ ವಾಪಸು ಹೋಗುತ್ತಾರೆ.

Mr. SPEAKER.—Qustion No. 972.

†Sri S. R. KANTHI.—This is *sub judice*.

Mr. SPEAKER.—Then it is held over.

Sri S. SIVAPPA.—What is before the Supreme Court which makes it *sub judice* ?

Mr. SPEAKER.—I am asking the Minister to give a copy, if available, of the writ petition. I will hold over the question. We will decide it to-morrow or the day after to-morrow.

Sri S. SIVAPPA.—This question regarding admission to the technical colleges was held over during the last session for the reason that it was *sub judice*.

Sri S. R. KANTHI.—What I know is that it is an appeal.....

Mr. SPEAKER.—Against what ?

Sri S. R. KANTHI.—Against the three orders of the Government.

Sri M. V. RAMA RAO (Minister for Law).—An order of the Government may be questioned by way of a writ petition before the High Court. Upon a judgment given by the High Court, the agrieved party goes up in appeal to the Supreme Court. It would be an appeal against the judgment of the High Court. It could not be an appeal against the orders of the Government.

Mr. SPEAKER.—The Hon'ble Minister may furnish as much material as possible. I will look into it and then pass it on to the members.

Sri C. J. MUCKANNAPPA.—The information as to how many applications were called for and how many students were admitted to to the College, is not *sub judice*. We are not going to question the policy; by asking what are the factors that guided the Committee to admit students. We are not going to elicit information regarding the revision of the Government order.

Mr. SPEAKER.—What is the point in stating like this when the Question is held over ?

Construction of Municipal High School Building at Arkalgud, Hassan District.

*Q.—950. Sri G. A. THIMMAPPA GOWDA (Arkalgud).—

Will the Government be pleased to state :—

(*a*) the date on which the estimate of the building for the Municipal High School, Arkalgud, was sanctioned ; and the date on which the work order was given to the Contractor ;

(*b*) the estimated cost of this building and the amount that has been spent so far and the amount that may be required to complete this work ;

(*c*) whether the construction work of this building is in progress as per the amount spent ; and if not, the reasons for the same ;

(*d*) whether they intend completing the work within a reasonable time this year ?

A.—Sri S. R. KANTHI (Minister for Education).—

(*a*) Proposal was approved by Government on 17th March 1956; technically sanctioned by the Chief Engineer (Communications and Buildings) on 25th April 1956; work order issued to the Contractor in July 1956.

(*b*) Original estimated cost is Rs. 60,135. The amount so far spent is Rs. 23,712-77 nP. An amount of Rs. 73,000 may be required as per revised requirements.

(*c*) and (*d*) The work has progressed to the extent of the amount spent. Further construction has been held up on account of the dispute between the Contractor and the Public Works Department and also for want of sanction of building grant towards revised estimate. The question of sanctioning building grant will be considered by Government after the Municipality agrees to bear its share of expenditure to the extent of 50 per cent of the additional cost involved.

2-30 P.M.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಈ ಹೈಸ್ಕೂಲು ಬಿಲ್ಡಿಂಗಿಗೆ ಆಗಿನ ಕಾನೂನನ್ನು ಅನುಸರಿಸಿ ಸುಮಾರು 30 ಸಾವಿರ ರೂಪಾಯಿಗಳನ್ನು 1955ನೆಯ ಇಸವಿಯಲ್ಲಿ ಮುನಿಸಿಪಾಲಿಟಿಯವರು ಡೆಪಾಸಿಟ್ ಮಾಡಿದ್ದರು. ಅದನ್ನು ಸರಕಾರ ಒಪ್ಪಿಕೊಂಡಿರಲಿಲ್ಲವೆ ?

†ಶ್ರೀ ಎಸ್. ಆರ್. ಕಂಠಿ.—ಆಗಿನ ಕಾಲಕ್ಕೆ, ಎಂದರೆ 17-3-1956ರಲ್ಲಿ, ಚೋಟರ್ ಎಸ್ಟಿಮೇಟ್ 60,135 ರೂಪಾಯಿಗಳಷ್ಟು ಆಗಿತ್ತು. ಗವರ್ನಮೆಂಟಿನವರು 30,068 ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡಿದ್ದರು. ಮುನಿಸಿಪಾಲಿಟಿಯವರು ಅರ್ಧ ಹಣ ಡೆಪಾಸಿಟ್ ಮಾಡಿದಮೇಲೆ ಗವರ್ನಮೆಂಟಿನವರು ಒಪ್ಪಿಕೊಂಡಿದ್ದರು.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಮುನಿಸಿಪಾಲಿಯವರು ಲಂಪ್‌ಸಮ್ ಅಮೌಂಟು ಕೊಟ್ಟು ತಮ್ಮ ಕರ್ತವ್ಯ ನೆರವೇರಿಸಿದ ಮೇಲೆ ಕಟ್ಟಡ ಕಟ್ಟತಕ್ಕಂಥ ಜವಾಬ್ದಾರಿ ಪಿ.ಡಬ್ಲ್ಯು.ಡಿಯದು ತಾನೆ ?